ಹಾಕಿಕೊಳ್ಳಲಾಗದೇ ಕೂದಲನ್ನು ಹಾಗೇ ಗಾಳಿಗೆ ಬಿಡಲಾರಂಭಿಸಿದರು. ಅದೇ ಫ್ಯಾಷನ್ ಕೂಡ ಆಗಿತ್ತು. ಕೂದಲು ಹೇಗೇ ಇರಲಿ, ಕಡಿಮೆ ಇರಲಿ, ಹೆಚ್ಚಿರಲಿ, ಉದ್ದವಿರಲಿ, ಗಿಡ್ಡವಿರಲಿ ಅದನ್ನೇ ಟ್ರಿಮ್ ಮಾಡಿಕೊಂಡು ಬ್ಲಂಟ್ ಕಟ್, ರೌಂಡ್ ಶೇಪ್, ಯು ಕಟ್ ಎಂದೆಲ್ಲ ಕೂದಲನ್ನು ಬಿಡಲಾರಂಭಿಸಿದ್ದು ಕೂಡ ಫ್ಯಾಷನ್ ಟ್ರೆಂಡ್ ಆಯಿತು. ಗಾಳಿಯಲ್ಲಿ ಹಾರಾಡಿದಾಗ, ಬೆವರು ತುಂಬ ಬರಲಾರಂಭಿಸಿದಾಗ ಫ್ರೀ ಆಗಿ ಬಿಟ್ಟ ತಲೆಗೂದಲು ಮತ್ತೆ ಕಿರಿಕಿರಿಯಾಗ ತೊಡಗಿತು. ಅಲ್ಲದೆ ಮಳೆ ಬಂದಾಗ ಕೂದಲು ಒದ್ದೆಯಾಗಿ, ಮುದ್ದೆಯಾದ ಕೂದಲು ಮತ್ತೂ ಅಸಡ್ಡೆಗೆ ಕಾರಣವಾಯಿತು. ಹೀಗಾಗಿ ಮತ್ತೆ ಜಡೆ ಫ್ಯಾಷನ್ ಕಾಯಂ ಆಗಿದೆ. ಇವೆಲ್ಲ ತೆರೆಮರೆಗೆ ಸರಿದು ಬಟರ್‌ಫ್ಲೈ ಕ್ಲಿಪ್, ಪ್ರೆಸ್ಸಿಂಗ್ ಕ್ಲಿಪ್‌ಗಳು ಕೂದಲನ್ನು ಅಲಂಕರಿಸತೊಡಗಿವೆ. ಈಗ ಮತ್ತೆ ತರಾವರಿ ಜಡೆಗಳು ಪ್ರತ್ಯಕ್ಷವಾಗಿದೆ. ಮದುವೆ ರಿಸೆಪ್ಷನ್ ಇದ್ದಾಗ ಮೆಸ್ಸಿನಾಟ್ ಕೇಶಶೈಲಿ ಜನಪ್ರಿಯವಾಗುತ್ತಿದೆ.

### ಕಾಲಕ್ಕೆ ತಕ್ಕಂತ ಕೇಶಶೈಲಿ...

ಕೂದಲು ಸ್ವಲ್ಪ ಕಡಿಮೆ ಇದ್ದಾಗ ಫ್ರೆಂಚ್ ಶೈಲಿಯ ಕೇಶಾಲಂಕಾರ ಬಂತು. ಫ್ರೆಂಚ್‌ಪ್ಲೀಟ್ ಎಂದು ಕರೆಯಲಾಗುವ ಈ ಕೇಶಶೈಲಿ ಬೇಗನೆ ಜನಪ್ರಿಯವೂ ಆಗಿ ಇದೀಗ ಮತ್ತೆ ಫ್ಯಾಷನ್ ಟ್ರೆಂಡ್ ಆಗಿದೆ. ಹೀಗಾಗಿ ಈಗಲೂ ಸಮಾರಂಭಗಳಿಗೆ ಹೋಗುವ ಫ್ಯಾಷನಬಲ್ ಹೆಂಗಳೆಯರು ಫ್ರೆಂಚ್ ಪ್ಲೀಟ್‌ಗೇ ಆದ್ಯತೆ ಕೊಡುತ್ತಿದ್ದಾರೆ. ಶಾಪಿಂಗ್, ಪಾರ್ಟಿ, ಮೀಟಿಂಗ್ ಸೇರಿದಂತೆ ಕಚೇರಿಗೆ ತೆರಳುವ ಮಹಿಳೆಯರು ಕೂಡ ಇದೇ ಕೇಶಶೈಲಿಗೆ ಆತುಕೊಂಡಿದ್ದಾರೆ.

ಫ್ರೆಂಚ್ ಪ್ಲೀಟ್ ಜಡೆಗೆ ಸ್ಟೆಪ್ ಜಡೆ ಎಂದೂ ಹೆಸರಿದೆ. ಸ್ವಲ್ಪ ಕೂದಲನ್ನು ತೆಗೆದು ಜಡೆ ಹಾಕಿ ಅಲಂಕರಿಸಿದರೆ ಕೂದಲು ಆಕರ್ಷಕವಾಗಿ ಕಾಣುತ್ತದೆ. ಜೊತೆಗೆ ಕೂದಲನ್ನು ವಿಭಾಗಿಸಿ ಫ್ರೆಂಚ್ ಪ್ಲೀಟ್ ಹಾಕಿಕೊಳ್ಳಬಹುದು.

‘ಮೊಗ್ಗಿನ ಜಡೆ ಹಿಂದಿನಿಂದಲೂ ಫ್ಯಾಷನ್ ಆಗಿಯೇ ಇದ್ದ ಕೇಶಶೈಲಿ. ಇದನ್ನು ಸಾಮಾನ್ಯವಾಗಿ ಎಲ್ಲರೂ ಇಷ್ಟಪಡುತ್ತಾರೆ. ಸಾಂಪ್ರದಾಯಿಕ ಮದುವೆಗಳಲ್ಲಿ ಇದು ಪರಂಪರೆ ಆದರೂ ಇಂದೂ ಬಹುತೇಕರು ಮದುವೆ ಸಮಾರಂಭಕ್ಕಾಗಿ ಮೊಗ್ಗಿನ ದಂಡೆಯ ಜಡೆಯನ್ನೇ ಬಯಸುತ್ತಾರೆ. ಇತರ ಹೂವುಗಳಲ್ಲಿ ಜಪಾನಿ ಶೈಲಿಯ ಇಕೆಬಾನ ಹೂವುಗಳ ಅಲಂಕಾರದ ಜತೆಗೆ ‘ಮೆಸ್ಸಿ ನಾಟ್, ಮೆಸ್ಸಿ ಜಡೆ’ ಅಲಂಕಾರವೂ ಇಂದಿನ ಲೇಟೆಸ್ಟ್ ಫ್ಯಾಷನ್ ಟ್ರೆಂಡ್ ಆಗಿದೆ.

ಕೆಲವು ಸಲ ಆಕರ್ಷಕವಾದ ಕೃತಕ ಹೂವುಗಳಿಂದಲೂ ಅಲಂಕಾರ ಮಾಡುತ್ತೇವೆ. ಇವುಗಳು ನೈಜ ಹೂವುಗಳಂತೆಯೇ ಕಾಣುತ್ತವೆ’ ಎಂದು ಹೇಳುತ್ತಾರೆ ಸೌಂದರ್ಯತಜ್ಞೆ ಉಮಾ ಜಯಕುಮಾರ್.



## ತಲೆಗೂದಲು ಉದುರುವುದೇಕೆ?

ಜೀವನಶೈಲಿ ಬದಲಾವಣೆಯಿಂದ ಹಾಗೂ ಆಹಾರಕ್ರಮ ಸರಿಯಾಗಿ ಪಾಲಿಸದ ಕಾರಣ ಇಂದು ಬಹಳ ಜನರಿಗೆ ತಲೆಗೂದಲ ಸಮಸ್ಯೆ ತಲೆದೋರುತ್ತಿದೆ. ಇದರಿಂದ ಮಾನಸಿಕ ಒತ್ತಡಕ್ಕೂ ಒಳಗಾಗುತ್ತಿದ್ದಾರೆ. ಇದು ಕೂದಲ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ.

ಅಧಿಕ ಒತ್ತಡದಿಂದ 25 ರಿಂದ 35 ರ ವಯೋಮಾನದ ಶೇ. 85 ರಷ್ಟು ಯುವಕ ಮತ್ತು ಯುವತಿಯರು ಕೂದಲು ಉದುರುವಿಕೆಯಿಂದ ಬಳಲುತ್ತಿದ್ದಾರೆ ಎಂಬ ಆಘಾತಕಾರಿ ಅಂಶವನ್ನು ಹೇರ್‌ಲೈನ್ ಇಂಟರ್‌ನ್ಯಾಷನಲ್ ರಿಸರ್ಚ್ ಸೆಂಟರ್ ಈಚೆಗೆ ನಡೆಸಿದ ಸಮೀಕ್ಷೆಯಲ್ಲಿ ಹೊರಗೆಡವಿದೆ. ಈ ಸಂಸ್ಥೆ 2014ರಿಂದ 2016ರವರೆಗೆ ಎರಡು ವರ್ಷಗಳ ಅವಧಿಯಲ್ಲಿ ಈ ಸಮೀಕ್ಷೆ ನಡೆಸಿ ಬೆಂಗಳೂರಿನಲ್ಲಿರುವ ಆರು ಘಟಕಗಳಲ್ಲಿ ಅಧ್ಯಯನ ನಡೆಸಿದೆ.

ತಲೆಕೂದಲ ಸಮಸ್ಯೆಯಿಂದ ಬಳಲುವ ಸುಮಾರು ಒಂದು ಸಾವಿರ ಮಂದಿಯನ್ನು ಎರಡು ವರ್ಷಗಳ ಅವಧಿಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಇವರಲ್ಲಿ ಶೇ. 80ರಷ್ಟು ಮಂದಿ ಯುವಕ–ಯುವತಿಯರು ಕೂದಲು ಉದುರುವಿಕೆ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂಬುದು ಗೊತ್ತಾಗಿದೆ.

‘ಉದ್ದ ಕೂದಲು ಇದ್ದವರಿಗೆ ಕೇಶಶೈಲಿಯಲ್ಲೂ ವೈವಿಧ್ಯತೆ ಸಿಗುತ್ತದೆ. ಹತ್ತು ಹಲವು ರೀತಿಯಲ್ಲಿ ವಿನ್ಯಾಸ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ನೀಳಕೂದಲನ್ನು ಸುಂದರವಾಗಿ ಸುತ್ತಿ ಅಲಂಕಾರಿಕ ಕ್ಲಿಪ್ ಹಾಕಿಕೊಂಡರೆ ನಿಮಿಷದಲ್ಲಿ ಹತ್ತಾರು ಕೇಶವಿನ್ಯಾಸ ಮಾಡಿ ಮುಗಿಸಿಬಿಡಬಹುದು. ಇದರ ಮೇಲೆ ಮುತ್ತು, ಹವಳಗಳನ್ನು ಒಂದೊಂದಾಗಿ ಇಡುತ್ತಾ ಬಂದರೆ ಕೇಶಶೈಲಿ ಚೆನ್ನಾಗಿ ಕಾಣುತ್ತದೆ. ಜೊತೆಗೆ ಮಲ್ಲಿಗೆ, ಗುಲಾಬಿ ಎಸಳುಗಳನ್ನು ಪೋಣಿಸಿದರೂ ಕೇಶಶೈಲಿ ಸಖತ್ ಆಗಿರುತ್ತದೆ, ಫ್ರೆಂಚ್ ಮಾದರಿಯ ಕೇಶ ಶೈಲಿ ಕೂಡ ಉದ್ದ ಕೂದಲಿನವರಿಗೆ ಚೆನ್ನಾಗಿ ಒಪ್ಪುತ್ತದೆ. ನೀಳಕೂದಲನ್ನು ಎಳೆ ಎಳೆಯಾಗಿ ಬಿಡಿಸಿ ಹೆಣೆದು ಮಾಡುವ ಕೇಶ ವಿನ್ಯಾಸ ಇಡೀ ದಿನ ಎಷ್ಟೇ ಚಟುವಟಿಕೆಗಳಲ್ಲಿ ತೊಡಗಿದ್ದರೂ ಅಲ್ಲಾಡದೆ ಹಾಗೇ ಇರುತ್ತದೆ’ ಎಂದು ಹೇಳುತ್ತಾರೆ ಲಿಮ್ಕಾ ದಾಖಲೆ ಖ್ಯಾತಿಯ ಉಮಾ ಜಯಕುಮಾರ್.

ವಿವಿಧ ರೀತಿಯ ಕೇಶಶೈಲಿಯನ್ನು ಇಷ್ಟಪಡುವವರು ಫ್ರೆಂಚ್ ಪ್ಲೀಟ್ ಅನ್ನು ಖಂಡಿತಾ ಇಷ್ಟಪಡುತ್ತಾರೆ. ಸಂಪ್ರಾದಯಕ್ಕೂ ಸೈ, ಫ್ಯಾಷನ್‌ಗೂ ಜೈ ಎಂದು ಯುವತಿಯರು ರುಚಿಕರ ಫ್ರೆಂಚ್ ಫ್ರೈಸ್ ತಿನ್ನುವಂತೆ ಆಕರ್ಷಕ ಫ್ರೆಂಚ್ ಪ್ಲೀಟ್ ಮಾಡಿಸಿಕೊಂಡು ಸಖತ್ ಆಗಿ ಮಿಂಚುತ್ತಿದ್ದಾರೆ. ■